## ಕನ್ನಡದ ದೀಪ

‘ತಿರುವನಂತಪುರದಲ್ಲಿ ಹಚ್ಚಿದರು ಕನ್ನಡದ ದೀಪ’ (ಶ್ಯಾಮಲಾ ಸತ್ಯ, ನ. 4) ಓದಿ ಖುಷಿಯಾಯಿತು. ಕರ್ನಾಟಕದ ವಿವಿಧ ಭಾಗಗಳಿಂದ ಕೇರಳದ ತಿರುವನಂತಪುರಕ್ಕೆ ವಲಸೆ ಬಂದ ಕನ್ನಡಿಗರು ಒಂದುಗೂಡಿ 1971ರಲ್ಲಿ ಸ್ಥಾಪಿಸಿದ ‘ಕರ್ನಾಟಕ ಸಂಘ’ವನ್ನು ಇಂದಿಗೂ ಉಳಿಸಿ ಬೆಳೆಸಿಕೊಂಡು ಬರುತ್ತಿರುವುದು ಅಭಿನಂದನೀಯ.

—ಪಿ. ಜಯವಂತ ಪೈ, ಕುಂದಾಪುರ

ಲೇಖನ ಪ್ರಕಟಿಸಿದ್ದಕ್ಕೆ ಅನೇಕ ಧನ್ಯವಾದಗಳು. ಇದನ್ನು ಓದಿ ಕರ್ನಾಟಕ ಸಂಘದ ಸದಸ್ಯೆಯಾಗಿ ನನ್ನ ಜೀವನದ ಅಮೂಲ್ಯ ಸಮಯವನ್ನು ಕಳೆದ ನೆನಪುಗಳು ಮರುಕಳಿಸಿದವು. ಆ ಲೇಖನದಲ್ಲಿ ಉಲ್ಲೇಖಿಸಿದ ಪುಸ್ತಕಗಳಲ್ಲಿ ಒಂದಾದ ಪುರಂದರ ಕೀರ್ತನಾವಳಿಯನ್ನು ಮಲಯಾಳಂ ಲಿಪಿಯಲ್ಲಿ ಬರೆದ ಹೆಮ್ಮೆ ನನಗಿದೆ.

—ಪ್ರಭಾ ಸುಭಾಷ್, ಮಾಗಂಟಿ

## ಹಾಡು ಹುಟ್ಟಿದ ಗಳಿಗೆ

‘ಜಟಕಾ ಬಂಡಿ ಏರಿ ಕಾವ್ಯ ಪರಂಪರೆ ಸವಾರಿ’ (ಕಟ್ಟೆ ಗುರುರಾಜ್, ನ. 11) ಲೇಖನ ಚೆನ್ನಾಗಿತ್ತು. ‘ಆಕಸ್ಮಿಕ’ ಚಿತ್ರದ ‘ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು’ ಹಾಡು ಹುಟ್ಟಿದ ಸಂದರ್ಭ ತಿಳಿಸಿದ್ದಕ್ಕೆ ಧನ್ಯವಾದಗಳು. ಹಂಸಲೇಖ ಅವರ ಲೇಖನಿಯಿಂದ ಮೂಡಿಬಂದ ಅತ್ಯುತ್ತಮ ಸಾಹಿತ್ಯ, ಇಂಪಾದ ಸಂಗೀತ, ರಾಜಕುಮಾರ್ ಅವರ ಸೊಗಸಾದ ಗಾಯನ ಮತ್ತು ನಟನೆಯಿಂದ ಚಿರಕಾಲ ಎಲ್ಲರೂ ಗುನುಗುನಿಸುವ ಹಾಡಾಯಿತು.

—ರಾಘವೇಂದ್ರ ಜೋಯ್ಸ್, ಮೈಸೂರು

ರಾಜಕುಮಾರ್ ನಟನೆ, ಹಂಸಲೇಖ ರಚನೆ, ನಾಗಾಭರಣ ಚಿತ್ರಕಥೆ, ಹಾಡಿನ ಘಟನೆ ಇವೆಲ್ಲವೂ ಕನ್ನಡ ಸಾಂಸ್ಕೃತಿಕ ಲೋಕದ ಶಾಶ್ವತ ಚಾರಿತ್ರಿಕ ದಾಖಲೆಯಾಗಿವೆ.

—ಎಂ. ನರಸಿಂಹ, ಬೆಂಗಳೂರು

## ಬದುಕಿನ ಘನತೆ ಮುಕ್ಕಾಗಿಸದಿರೋಣ

‘ಮಕ್ಕಳ ಬದುಕಿನ ಘನತೆ ಮುಕ್ಕಾಗಿಸದಿರೋಣ’ (ರಘುನಾಥ ಚ.ಹ., ನ.4) ಲೇಖನ ಯಾರಿಗೂ ಕಾಣದ ವಾಸ್ತವಿಕತೆಯ ಹೂರಣ ತೆರೆದಿಟ್ಟಿದೆ. ಅನಾಥಾಶ್ರಮಗಳು, ಅನಾಥಮಕ್ಕಳ ಬೇಕು ಬೇಡಗಳಿಗೆ ಬೆಂಬಲವಾಗಿ ಬೆಂಗಾವಲಾಗಿ ನಿಲ್ಲುವ ಆಸರೆಗಳಾಗಬೇಕು. ಅವರ ಮನಸ್ಸಿಗೆ ಗಾಸಿಗೊಳಿಸುವ ಪರರ ಚಟುವಟಿಕೆಯ ತಾಣಗಳಾಗಲು ಆಸ್ಪದವಿರಬಾರದು.

—ಎಚ್. ಸಿದ್ದಾರ್ಥ, ಉಡುಪಿ

## ಮೊಬೈಲ್ ಶಿಸ್ತು

‘ಮೊಬೈಲ್ ಶಿಸ್ತು– ಮಕ್ಕಳಿಗೂ ಪಾಲಕರಿಗೂ’ (ಸ್ವಯಂಪ್ರಭಾ ನ.4) ಲೇಖನದ ಲೇಖಕರಿಗೆ ನಾನು ಚಿರಋಣಿಯಾಗಿದ್ದೇನೆ. ಈ ಸಂದೇಶವು ಹೆತ್ತವರಿಗೆ ಹಾಗೂ ಪೋಷಕರಿಗೆ ಅತ್ಯಮೂಲ್ಯವಾಗಿದೆ. ಲೇಖನದಲ್ಲಿ ನೀಡಿದ ಮುನ್ನೆಚ್ಚರಿಕೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿದರೆ ಜೀವನದಲ್ಲಿ ಎದುರಾಗುವ ಕೆಲವು ತೊಡಕುಗಳಿಂದ ಪಾರಾಗಬಹುದು.

—ಹ್ಯಾರಿಸನ್, ಬೆಂಗಳೂರು

ಮೊಬೈಲ್ ಎಂಬುದು ಇಂದು ನಮಗೇ ಗೊತ್ತಿಲ್ಲದೆ ನಮ್ಮ ಬದುಕಿನ ಎಲ್ಲ ವಿಭಾಗಗಳಲ್ಲಿಯೂ ಆವರಿಸಿಕೊಂಡಿರುವ ಮಾಯಾಂಗನೆಯಾಗಿದೆ. ಪುಟ್ಟ ಕಂದಮ್ಮಗಳಿಗೆ ಹಿಂದೆ ಅಮ್ಮಂದಿರ ಲಾಲಿಯೇ ಎಲ್ಲವೂ ಆಗಿತ್ತು. ಆದರೆ ಅದರ ಜಾಗವನ್ನು ಇಂದಿನ ಮೊಬೈಲ್ ಅತಿಕ್ರಮಿಸಿದೆ. ಜಗತ್ತನ್ನು ಕಾಣುವ ವಯಸ್ಸಿನಲ್ಲಿಯೇ ಮೊಬೈಲ್‌ನಲ್ಲಿ ಮುಳುಗಿಹೋದರೆ ಗತಿಯೇನು? ಮಕ್ಕಳಿಗೆ ಮೊಬೈಲ್ ಬಿಡಿಸಬೇಕು ಎಂದರೆ ಅದಕ್ಕೂ ಮೊದಲು ಪಾಲಕರಾದ ನಾವು ಮೊಬೈಲ್‌ನಿಂದ ದೂರವಿರುವ ಅಗತ್ಯವಿದೆ. ಇದನ್ನು ಲೇಖಕಿ ತುಂಬ ಚೆನ್ನಾಗಿ ವಿವರಿಸಿದ್ದಾರೆ.

—ಚಂದ್ರಲೇಖಾ ಪ್ರತೀಕ್, ಸೊರಬ



## ಉತ್ತಮ ಕಥೆ

‘ಗೆಜ್ಜೆನಾದ’ (ಶ್ವೇತಾ ನರಗುಂದ, ನ.4) ಸಣ್ಣಕಥೆ ತುಂಬಾ ಚೆನ್ನಾಗಿದೆ. ಪ್ರಾರಂಭದಿಂದ ಕೊನೆಯವರೆಗೂ ಕೌತುಕದಿಂದ ಓದಿಸಿಕೊಂಡು ಹೋಯಿತು. ‘ಗೆಜ್ಜೆದನಿ ಜೀವಪಡೆದು ತೇಲಿ ಬರುತ್ತಿತ್ತು’ ಎಂಬಲ್ಲಿಗೆ ನಿಲ್ಲಿಸದೆ, ಇನ್ನೂ ಸ್ವಲ್ಪ ಮುಂದುವರಿಸಿ ಶ್ರೀಲತಾ ಹಾಗೂ ತೇಜಶ್ರೀ ಅವರನ್ನು ಮಿಲಾಯಿಸಿದ್ದರೆ ಚೆನ್ನಾಗಿತ್ತು.

—ಪಿ.ಎನ್. ಭಂಡಾರೆ

ಕಥೆಯಲ್ಲಿ ಮನುಷ್ಯ ಸಂಬಂಧಗಳ ಸಂಕೀರ್ಣತೆಯನ್ನು ಅರ್ಥವತ್ತಾಗಿ ಕಟ್ಟಿಕೊಟ್ಟಿದ್ದಾರೆ. ಪ್ರೇಮ, ಭಗ್ನಪ್ರೇಮ, ಬದುಕಿನಲ್ಲಿ ಗೊತ್ತಿಲ್ಲದೆ ಎದುರಾಗುವ ತಿರುವುಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ.

—ಎಂ. ಟಿ. ರಮಾನಂದ ರೆಡ್ಡಿ, ಮದಕರಿಪುರ

## ಹಸಿರು ದೀಪಾವಳಿ

‘ಹಸಿರು ದೀಪಾವಳಿ’ (ಗುರುರಾಜ್ ಎಸ್. ದಾವಣಗೆರೆ, ನ.4) ಮುಖಪುಟ ಲೇಖನ ತುಂಬಾ ಉಪಯುಕ್ತ ಮಾಹಿತಿ ಒದಗಿಸಿದೆ. ಏನಿದು ಪರಿಸರಸ್ನೇಹಿ ಹಸಿರು ಪಟಾಕಿ? ಅದರಿಂದ ಕಡಿಮೆ ವಾಯು ಹಾಗೂ ಶಬ್ದ ಮಾಲಿನ್ಯ ಹೇಗೆ ಸಾಧ್ಯ? ಎಂಬೆಲ್ಲ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡೆವು.

—ಶೀಲಾ, ಬೆಂಗಳೂರು



ಮುಖಪುಟ ಮತ್ತು ಮುಖಪುಟ ಲೇಖನ ಎರಡೂ ಅರ್ಥಪೂರ್ಣವಾಗಿದ್ದವು. ಗರ್ಭಿಣಿ ಆನೆಯೊಂದು ಪಟಾಕಿ ತುಂಬಿದ ಪೈನಾಪಲ್ ಸೇವಿಸಿ ಮರಣಿಸಿದ ಹೃದಯ ವಿದ್ರಾವಕ ಘಟನೆಯು ‘ಹಸಿರು ದೀಪಾವಳಿ’ ವಿಶೇಷ ಲೇಖನದಲ್ಲಿ ಮರುಕಳಿಸಿ ಕಣ್ಣು ಹನಿಗೂಡಿದವು. ಪುರಾಣ ಇತಿಹಾಸದ ವಿಶೇಷ ದಾಖಲಾತಿಗಳೊಂದಿಗೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳಕಿನ ಪಟಾಕಿ ಹಬ್ಬದ ಸಂಸ್ಕೃತಿಯು ಬೆಳೆದು ಬಂದ ಬಗ್ಗೆ ನಮಗೆ ಗೊತ್ತಿಲ್ಲದ ಹಲವು ಮಾಹಿತಿಗಳನ್ನು ಲೇಖನವು ಒದಗಿಸಿದೆ.

—ಸುಶೀಲಾ ಸೋಮಶೇಖರ್, ಹಾಸನ

## ಇಸ್ತಾನ್‌ಬುಲ್

‘ತಬ್ಬಲಿಗಳಿಗೆ ಮಡಿಲಾದ ಅಂತಃಕರಣದ ನಗರ’ (ರಹಮತ್ ತರೀಕೆರೆ, ನ.4) ಪ್ರವಾಸಕಥನ ಓದಿ ಮನಸ್ಸು ಆರ್ದ್ರವಾಯಿತು. ಪ್ರವಾಸಕಥನವೆಂದರೆ ತಾವು ಸುತ್ತಾಡಿ ಬಂದ ಜಾಗದ ವೀಕ್ಷಕ ವಿವರಣೆ ಎಂದೇ ಬಹುತೇಕರು ಭಾವಿಸಿರುವಾಗ, ಒಂದು ನಗರದ ಅಂತಃಕರಣವನ್ನು ಇಣುಕಿನೋಡಿ, ಅದರ ನೋವು–ಸೊಬಗುಗಳನ್ನು ಓದುಗರಿಗೂ ದಾಟಿಸುವ ಈ ಬರಹ ನಿಜಕ್ಕೂ ಒಳ್ಳೆಯ ಮಾದರಿ.

—ಅಭಿಜ್ಞಾ, ತುಮಕೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in